**MARCH 31, 2024**

**ALL INDIA RADIO- DHARWAD**

**PRADESH SAMACHARA (KANNADA) 7:05 AM**

<><><>

**ಆಕಾಶವಾಣಿ–ಪ್ರದೇಶ ಸಮಾಚಾರ**

<><><>

**ಓದಿದವರು: ಹರ್ಷವರ್ಧನ ಶೀಲವಂತ**

<><><>

**ಮುಖ್ಯಾಂಶಗಳು**

<><><>

- ಇಂದು, ಪ್ರಸಕ್ತ ಆರ್ಥಿಕ ವರ್ಷ ಮುಕ್ತಾಯ; ಬ್ಯಾಂಕ್ ಮತ್ತು ಎಲ್.ಐ.ಸಿ. ಭಾನುವಾರವೂ ಕಾರ್ಯನಿರ್ವಹಣೆ.
- ನಾಳೆ, ಏಪ್ರಿಲ್ 1 ರಿಂದ ನೂತನ ಹಣಕಾಸು ವರ್ಷಾರಂಭ; ಹಲವು ನಿಯಮಗಳಲ್ಲಿ ಮಹತ್ವದ ಬದಲಾವಣೆ.
- 18ನೇ ಲೋಕಸಭಾ ಚುನಾವಣೆ; ಅಭ್ಯರ್ಥಿಗಳ ಚುನಾವಣಾ ವೆಚ್ಚದ ಮೇಲೆ ತೀವ್ರ ನಿಗಾ.
- ಕೊಡಗಿನ ನಾಪೋಕ್ಲು ಗ್ರಾಮದಲ್ಲಿ, 24ನೇ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಗೆ ಸಂಭ್ರಮದ ಚಾಲನೆ.

<><><>

**ಈಗ ವಾರ್ತೆಗಳ ವಿವರ**

<><><>

ಇಂದು ಮಾರ್ಚ್ 31, ಭಾನುವಾರ. ಪ್ರಸಕ್ತ ಆರ್ಥಿಕ ವರ್ಷದ ಕೊನೆಯ ದಿನ. ಹೀಗಾಗಿ ಇಂದು, ಎಲ್ಲ ಬ್ಯಾಂಕ್ ಶಾಖೆಗಳು ಮತ್ತು ಜೀವ ವಿಮಾ ನಿಗಮದ ಕಚೇರಿಗಳು ಕಾರ್ಯನಿರ್ವಹಿಸಲಿವೆ. ಪ್ರಸಕ್ತ ಹಣಕಾಸು ವರ್ಷದ ಕೊನೆಯ ದಿನ, ಸರ್ಕಾರದ ಸ್ವೀಕೃತಿ ಮತ್ತು ಪಾವತಿಗಳಿಗೆ ಅನುಕೂಲವಾಗುವಂತೆ, ವಹಿವಾಟುಗಳನ್ನು ನಡೆಸಲು, ಬ್ಯಾಂಕ್‌ಗಳು ಕರ್ತವ್ಯ ನಿರ್ವಹಿಸಬೇಕೆಂಬ ಸರ್ಕಾರದ ಮನವಿ ಮೇರೆಗೆ, ರಿಸರ್ವ್ ಬ್ಯಾಂಕ್ ಈ ಸೂಚನೆ ನೀಡಿದೆ.

<><><>

ನಾಳೆ ಏಪ್ರಿಲ್ 1, ಸೋಮವಾರದಿಂದ ನೂತನ ಆರ್ಥಿಕ ವರ್ಷ ಆರಂಭವಾಗಲಿದೆ. ವಹಿವಾಟು ಕ್ಷೇತ್ರದಲ್ಲಿ ನೂತನ ಪ್ರಕ್ರಿಯೆಗಳು ಕಾರ್ಯಾರಂಭಿಸಲಿವೆ. ಫಾಸ್ಟ್ ಟ್ಯಾಗ್ ಕೆವೈಸಿ ಅಪ್‌ಡೇಟಿಂಗ್, ಪ್ಯಾನ್–ಆಧಾರ್ ಜೋಡಣೆಗೆ ನೀಡಲಾಗಿದ್ದ ಅವಕಾಶ ಇಂದಿಗೆ ಮುಕ್ತಾಯಗೊಳ್ಳುವುದು.

<><><>

ಪ್ಯಾನ್ ಮತ್ತು ಆಧಾರ್ ಕಾರ್ಡ್ ಜೋಡಣೆಗೆ ಅಂತಿಮ ಗಡುವು ಸಹ ಇಂದು ಮುಕ್ತಾಯವಾಗುವುದು. ಪ್ಯಾನ್-ಆಧಾರ್ ಜೋಡಣೆ ಮಾಡಿರದಿದ್ದರೆ, ಏಪ್ರಿಲ್ 1 ರ ನಂತರ ಒಂದು ಸಾವಿರ ರೂಪಾಯಿ ದಂಡ ಕಟ್ಟಬೇಕಾಗುತ್ತದೆ.

<><><>

ನಾಳೆಯಿಂದ ಎಸ್.ಬಿ.ಐ. ಕ್ರೆಡಿಟ್ ಕಾರ್ಡ್ ನಿಯಮಗಳು ಸಹ ಬದಲಾಗಲಿವೆ. ನೂತನ ಆರ್ಥಿಕ ವರ್ಷದಿಂದ ವಿಮಾ ನಿಯಮಗಳಲ್ಲೂ ಬದಲಾವಣೆಯಾಗಲಿದೆ. ನೌಕರರ ಭವಿಷ್ಯ ನಿಧಿ ನಿಯಮಗಳು ಸಹ ಬದಲಾಗಲಿವೆ.

<><><>

2 ಸಾವಿರ ರೂಪಾಯಿ ಮುಖ ಬೆಲೆಯ ನೋಟು ವಿನಿಮಯ ಸೇವೆ ಸಹ, ನಾಳೆ ಅಂತ್ಯಗೊಳ್ಳಲಿದೆ.

<><><>

18ನೇ ಸಾರ್ವತ್ರಿಕ ಲೋಕಸಭೆ ಚುನಾವಣೆಗೆ, ಪೂರ್ವಭಾವಿಯಾಗಿ, ಎಲ್ಲೆಡೆ ಚುನಾವಣಾ ವೆಚ್ಚವೀಕ್ಷಕರು, ಫ್ಲೈಯಿಂಗ್ ಸ್ಕ್ವಾಡ್‌ಗಳು, ವಿಡಿಯೋ ಸರ್ವೇಲನ್ಸ್, ಸ್ಟಾಟಿಕ್ ಸರ್ವೇಲನ್ಸ್ ತಂಡಗಳು, ರಾಜ್ಯಾದ್ಯಂತ 28 ಕ್ಷೇತ್ರಗಳಲ್ಲಿ ಕಟ್ಟೆಚ್ಚರ ವಹಿಸಿವೆ.

<><><>

ರಾಜ್ಯದ 28 ಲೋಕಸಭಾ ಮತಕ್ಷೇತ್ರಗಳಲ್ಲಿ ರಾಜಕೀಯ ಅಭ್ಯರ್ಥಿಗಳ ಚುನಾವಣಾ ಖರ್ಚು ವೆಚ್ಚದ ಮೇಲೆ ನಿಗಾ ವ್ಯವಸ್ಥೆಯನ್ನು ಬಿಗಿ ಗೊಳಿಸಲಾಗಿದೆ.

<><><>

ಮೊದಲ ಹಂತದ ಸಾರ್ವತ್ರಿಕ ಲೋಕಸಭಾ ಚುನಾವಣೆಗೆ ನಾಮಪತ್ರ ಹಿಂಪಡೆಯಲು ನಿನ್ನೆ ಕೊನೆಯ ದಿನವಾಗಿತ್ತು. ಮೊದಲ ಹಂತದಲ್ಲಿ 17 ರಾಜ್ಯಗಳು ಹಾಗೂ 4 ಕೇಂದ್ರಾಡಳಿತ ಪ್ರದೇಶಗಳನ್ನು ಒಳಗೊಂಡಂತೆ, 102 ಲೋಕಸಭಾ ಕ್ಷೇತ್ರಗಳಲ್ಲಿ, ಏಪ್ರಿಲ್ 19 ರಂದು ಮತದಾನ ನಿಗದಿಯಾಗಿದೆ. ಆ ಪೈಕಿ ರಾಜ್ಯದ 14 ಲೋಕಸಭಾ ಕ್ಷೇತ್ರಗಳಲ್ಲಿ ಮತದಾನ ಅಂದು ನಡೆಯಲಿದೆ.

<><><>

ಬ್ಯಾಂಕ್‌ಗಳಲ್ಲಿ ಒಂದು ಬಾರಿಗೆ 10ಕ್ಕಿಂತ ಹೆಚ್ಚು ಖಾತೆಗಳಿಗೆ, 10 ಲಕ್ಷ ರೂಪಾಯಿಗಿಂತ ಹೆಚ್ಚು ಹಣ ವರ್ಗಾವಣೆಯಾದಲ್ಲಿ ಪರಿಶೀಲಿಸಬೇಕು ಎಂದು ಮೈಸೂರು-ಕೊಡಗು ಲೋಕಸಭಾ ಕ್ಷೇತ್ರದ ವೆಚ್ಚ ವೀಕ್ಷಕರಾದ ಎಂ. ಮೋಹನ್ ಬಾಬು ಅಧಿಕಾರಿಗಳಿಗೆ ಸೂಚಿಸಿದ್ದಾರೆ.

<><><>

ಕೋಲಾರ ಮೀಸಲು ಲೋಕಸಭಾ ಕ್ಷೇತ್ರಕ್ಕೆ ಕಾಂಗ್ರೆಸ್ ಅಭ್ಯರ್ಥಿಯಾಗಿ ಕೆ.ವಿ.ಗೌತಮ್ ಅವರನ್ನು ಆಯ್ಕೆ ಮಾಡಿದೆ.

<><><>

ವಿಧಾನ ಪರಿಷತ್ ಸದಸ್ಯ ಸ್ಥಾನಕ್ಕೆ ಇತ್ತೀಚೆಗೆ ರಾಜಿನಾಮೆ ಸಲ್ಲಿಸಿದ್ದ, ತೇಜಸ್ವಿನಿ ಗೌಡ, ಬಿಜೆಪಿ ತೊರೆದು ದಿಲ್ಲಿಯಲ್ಲಿ ಕಾಂಗ್ರೆಸ್‌ಗೆ ಸೇರ್ಪಡೆಯಾಗಿದ್ದಾರೆ.

<><><>

ಧಾರವಾಡ ಮಹಾನಗರ ಪಾಲಿಕೆ, ಹುಬ್ಬಳ್ಳಿಯ ವಿವಿಧ ಮಾಲ್ ಹಾಗೂ ಸೂಪರ್ ಮಾರ್ಕೆಟ್‌ಗಳಲ್ಲಿ ಅಳವಡಿಸಿದ, ಮತದಾನ ಜಾಗ್ರತಿ ಕುರಿತ, ಸೆಲ್ಫೀ ಪಾಯಿಂಟ್ ಹಾಗೂ ಸ್ಟ್ಯಾಂಡೀಸ್, ಯುವ ಮತದಾರರ ಗಮನ ಸೆಳೆಯುತ್ತಿವೆ ಎಂದು, ಹುಬ್ಬಳ್ಳಿ-ಧಾರವಾಡ ಮಹಾನಗರ ಪಾಲಿಕೆಯ ಆಯುಕ್ತ, ಈಶ್ವರ ಉಳಾಗಡ್ಡಿ ಆಕಾಶವಾಣಿಗೆ ತಿಳಿಸಿದ್ದಾರೆ.

<><><>

**ಈಶ್ವರ ಉಳ್ಳಾಗಡ್ಡಿ ಧ್ವನಿ 31 ಸೆಕೆಂದುಗಳು**

<><><>

**ಕೊಪ್ಪಳ ಜಿಲ್ಲೆ ಸ್ವೀಪ್ ಸಮಿತಿ, ವಿಶೇ 'ಚೇತನ ಮಹಿಳೆ ಪೂರ್ಣಿಮಾ ಏಳುಬಾವಿಯವರನ್ನು, ಮತದಾನ ಜಾಗೃತಿ ರಾಯಬಾರಿಯನ್ನಾಗಿ ನೇಮಕ ಮಾಡಿದೆ. ಪ್ರದೇಶ ಸಮಾಚಾರಕ್ಕಾಗಿ ಅವರು ತಮ್ಮ ಅನಿಸಿಕೆ ಹಂಚಿಕೊಂಡಿದ್ದಾರೆ.**

<><><>

**ಪೂರ್ಣಿಮಾ ಏಳುಬಾವಿ ಧ್ವನಿ 28 ಸೆಕೆಂದುಗಳು**

<><><>

**ವಿಜಯಪುರ ಜಿಲ್ಲೆಯ ಮಹಾರಾಷ್ಟ್ರ ಗಡಿಯಲ್ಲಿ, 11 ತನಿಖಾ ಠಾಣೆಗಳನ್ನು ಸ್ಥಾಪಿಸಲಾಗಿದೆ ಎಂದು, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ, ಹೃಷಿಕೇಶ್ ಸೋನವಾನೆ ತಿಳಿಸಿದ್ದಾರೆ.**

<><><>

**ಕಲಬುರಗಿಯಲ್ಲಿ, ಮಾಸ್ಟರ್ ಟ್ರೇನರ್ ಡಾಕ್ಟರ್ ಶಶಿಶೇಖರ ರೆಡ್ಡಿ ಅವರು, ಚುನಾವಣಾ ಕರ್ತವ್ಯನಿರತ ಅಧಿಕಾರಿಗಳಿಗೆ, ಪ್ರಾತ್ಯಕ್ಷಿಕೆ ನೀಡಿದರು.**

<><><>

**ರಾಮನಗರ ಲೋಕಸಭಾ ಕ್ಷೇತ್ರದ ಚೆನ್ನಪಟ್ಟಣ ತಾಲೂಕು ಅಳೆಹಳ್ಳಿ ಗ್ರಾಮದಲ್ಲಿ, ಮನ್ರೇಗಾ ಕೂಲಿ ಕಾರ್ಮಿಕರಿಗೆ, ಕೆಲಸದ ಸ್ಥಳದಲ್ಲೇ ಮತದಾನದ ಮಹತ್ವ ಕುರಿತು ವಿವರಿಸಲು, ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.**

<><><>

**ಬಾಗಲಕೋಟೆ ಜಿಲ್ಲೆ ಹುನಗುಂದ ಮತಕ್ಷೇತ್ರ ವ್ಯಾಪ್ತಿಯ, ಗುಗ್ಗಲಮರಿ ಹಾಗೂ ಧನ್ನೂರ ಚೆಕ್ ಪೋಸ್ಟ್‌ಗಳಲ್ಲಿ, ಸೂಕ್ತ ದಾಖಲೆ ಇಲ್ಲದ 35 ಲಕ್ಷದ 48 ಸಾವಿರ ರೂಪಾಯಿ ಹಣವನ್ನು ವಶ ಪಡಿಸಿಕೊಳ್ಳಲಾಗಿದೆ.**

<><><>

**ದಕ್ಷಿಣಕನ್ನಡ ಜಿಲ್ಲೆಯಲ್ಲಿ 41 ಲಕ್ಷ 80 ಸಾವಿರದ 391 ರೂಪಾಯಿ ಮೌಲ್ಯದ, ಅಕ್ರಮ ಮದ್ಯವನ್ನು ಜಪ್ತ ಮಾಡಲಾಗಿದೆ. 8 ಲಕ್ಷ 69 ಸಾವಿರದ 950 ರೂಪಾಯಿ ಮೌಲ್ಯದ 15.5 ಕಿಲೋ ಮಾದಕ ದ್ರವ್ಯವನ್ನು ವಶ ಪಡಿಸಿಕೊಳ್ಳಲಾಗಿದೆ.**

<><><>

**ಚಾಮರಾಜನಗರ ಜಿಲ್ಲೆ ಗುಂಡ್ಲುಪೇಟೆ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ, ಮದ್ದೂರು ಹಾಗೂ ಬಂಡೀಪುರ ಚೆಕ್ ಪೋಸ್ಟ್‌ಗಳಲ್ಲಿ, ಸೂಕ್ತ ದಾಖಲೆಗಳಿಲದ 4 ಲಕ್ಷ 98 ಸಾವಿರದ 500 ರೂಪಾಯಿಗಳನ್ನು ಅಧಿಕಾರಿಗಳು ವಶ ಪಡಿಸಿಕೊಂಡಿದ್ದಾರೆ.**

<><><>

**ಧಾರವಾಡ ಜಿಲ್ಲೆಯ ಮೂರು ಚೆಕ್ ಪೋಸ್ಟ್‌ಗಳಲ್ಲಿ, ಚುನಾವಣೆ ನೀತಿ ಸಂಹಿತೆ ಉಲ್ಲಂಘಿಸಿದ ಪ್ರಕರಣದಡಿ, ಒಟ್ಟು 6 ಲಕ್ಷ 89 ಸಾವಿರದ 500 ರೂಪಾಯಿ ನಗದು, ವಶ ಪಡಿಸಿಕೊಳ್ಳಲಾಗಿದೆ.**

<><><>

ಶಿವಮೊಗ್ಗ ಜಿಲ್ಲೆ, ಸಾಗರದ ಚೆಕ್ ಪೋಸ್ಟ್‌ನಲ್ಲಿ, ಅಂದಾಜು 2 ಲಕ್ಷ 23 ಸಾವಿರ ರೂಪಾಯಿ ಮೌಲ್ಯದ, ಅಕ್ರಮ ಮದ್ಯ ವಶಪಡಿಸಿಕೊಳ್ಳಲಾಗಿದೆ.

<><><>

ದಾಖಲೆ ಇಲ್ಲದೇ ಸಾಗಿಸುತ್ತಿದ್ದ, 8 ಲಕ್ಷದ 23 ಸಾವಿರ ರೂಪಾಯಿ ನಗದು ಬಳ್ಳಾರಿ ಜಿಲ್ಲೆ, ಕಂಪ್ಲಿ ಪಟ್ಟಣದ ಕೋಟೆ ಚೆಕ್ ಪೋಸ್ಟ್‌ನಲ್ಲಿ ವಶ ಪಡಿಸಿಕೊಳ್ಳಲಾಗಿದೆ.

<><><>

ಪ್ರದೇಶ ಸಮಾಚಾರ ಕೇಳುತ್ತಿದ್ದೀರಿ..

<><><>

ಬಾಗಲಕೋಟೆ ಪಟ್ಟಣಕ್ಕೆ ಕುಡಿಯುವ ನೀರು ಪೂರೈಸಲು, ಬನ್ನಿದಿನ್ನಿ ಬ್ಯಾರೇಜ್‌ಗೆ, ಬೆಳಗಾವಿ ಜಿಲ್ಲೆ ಹುಕ್ಕೇರಿ ತಾಲೂಕು ಹಿಡಕಲ್ ಜಲಾಶಯದಿಂದ, ಘಟಪ್ರಭಾ ನದಿಗೆ, 2 ದಶಾಂಶ 2-0 ಟಿ.ಎಂ.ಸಿ ನೀರನ್ನು, ನಾಳೆ ಸಂಜೆ 6 ಗಂಟೆಗೆ, ಬಿಡುಗಡೆಗೊಳಿಸಲಾಗುತ್ತಿದೆ.

<><><>

ಬಾಗಲಕೋಟೆ ಜಿಲ್ಲೆ, ಬೀಳಗಿ ಹಾಗೂ ಮುಧೋಳ ತಾಲೂಕಿನ ಮಂಟೂರು ಮಹಾಲಕ್ಷ್ಮೀ ನೀರಾವರಿ ಯೋಜನೆಯಿಂದ, ಕುಡಿಯುವ ನೀರಿಗಾಗಿ, ಕೃ ಷ್ಣ ನದಿ ಹಿನ್ನೀರಿನಿಂದ ಸೊನ್ನೆ ದಶಾಂಶ 2-6 ಟಿ.ಎಂ.ಸಿ. ನೀರನ್ನು ಬಳಸಲು, ಬೆಳಗಾವಿ ಪ್ರಾದೇಶಿಕ ಆಯುಕ್ತರು ಅನುಮತಿಸಿದ್ದಾರೆ.

<><><>

ಕಲಬುರಗಿ ಜಿಲ್ಲೆಯಲ್ಲಿ ಜನ-ಜಾನುವಾರುಗಳಿಗೆ ಕುಡಿಯುವ ನೀರು ಪೂರೈಸಲು, ನಾರಾಯಣಪುರ ಜಲಾಶಯದಿಂದ, ಕೆಂಭಾವಿ-ಇಂಡಿ ಕಾಲುವೆ ಮೂಲಕ ಭೀಮಾ ನದಿಗೆ ನೀರು ಹರಿಸಲಾಗುತ್ತಿದೆ. ನೀರು ಅನಗತ್ಯ ಪೋಲಾಗುವುದನ್ನು ತಡೆಯಲು ಮತ್ತು ಶಾಂತಿ ಸುವ್ಯವಸ್ಥೆ ಕಾಪಾಡಲು, ಏಪ್ರಿಲ್ 8ರ ವರೆಗೆ ಯಡ್ರಾಮಿ ಮತ್ತು ಅಫಜಲಪೂರ ತಾಲೂಕಿನ ಭೀಮಾ ನದಿ ದಂಡೆ ಹಾಗೂ ಕಾಲುವೆ ಸುತ್ತ ನಿಷೇಧಾಜ್ಞೆ ಜಾರಿಗೊಳಿಸಲಾಗಿದೆ.

<><><>

ಬೆಳಗಾವಿ ಜಿಲ್ಲೆಯಾದ್ಯಂತ, ಮುಂದಿನ ಎರಡು ತಿಂಗಳ ಅವಧಿಯಲ್ಲಿ ಜನ ಮತ್ತು ಜಾನುವಾರುಗಳಿಗೆ ಕುಡಿಯುವ ನೀರು, ಮೇವಿನ ಸಮಸ್ಯೆಯಾಗದಂತೆ ಮುಂಜಾಗ್ರತೆ ವಹಿಸುವಂತೆ, ಜಿಲ್ಲಾಧಿಕಾರಿ ನಿತೇಶ್ ಪಾಟೀಲ ಸೂಚಿಸಿದ್ದಾರೆ.

<><><>

ಚಾಮರಾಜನಗರ ಜಿಲ್ಲೆ, ಬಿಳಿಗಿರಿ ರಂಗನ ಬೆಟ್ಟ ಹುಲಿ ಅಭಯಾರಣ್ಯದ, ಬೈಲೂರು ವಲಯದ, ಕೆ.ಕೆ.ಡ್ಯಾಂ ಬಳಿ ಕಾಳ್ಗಿಚ್ಚು ಹಬ್ಬಿದ್ದು, ಅರಣ್ಯ ಇಲಾಖೆಯ 60 ಕ್ಕೂ ಹೆಚ್ಚು ಸಿಬ್ಬಂದಿ ಬೆಂಕಿ ನಂದಿಸುವ ಕಾರ್ಯದಲ್ಲಿ ನಿರತರಾಗಿದ್ದಾರೆ. ಗಾಳಿ ಬಲವಾಗಿ ಬೀಸುತ್ತಿರುವುದರಿಂದ, ಬೆಂಕಿ ವಿಸ್ತರಿಸುತ್ತಿದ್ದು, ಅರಣ್ಯ ಇಲಾಖೆ ಸಿಬ್ಬಂದಿ ಬೆಂಕಿ ನಂದಿಸಲು ಶ್ರಮಿಸುತ್ತಿದ್ದಾರೆ. ಬೆಂಕಿ ಕಾಣಿಸಿಕೊಂಡಿರುವ ಜಾಗೆಗಳಲ್ಲಿ ನಿಗಾ ವಹಿಸಲು, ಡ್ರೋಣ್ ಮೂಲಕ ಕಾರ್ಯಾಚರಣೆ ನಡೆಸಲಾಗುತ್ತಿದೆ. ಕಿಡಿಗೇಡಿಗಳು ಕಾಡಿಗೆ ಬೆಂಕಿ ಹಚ್ಚಿದ್ದಾರೆ ಎಂದು ಪ್ರಾಥಮಿಕ ಮಾಹಿತಿ ಬಂದಿದೆ. ಬೆಂಕಿಯನ್ನು ಹತೋಟಿಗೆ ತರಲಾಗುತ್ತಿದೆ ಎಂದು ಹುಲಿ ಯೋಜನೆ ನಿರ್ದೇಶಕಿ ದೀಪ್ ಕಾಂಟ್ರಾಕ್ಟರ್ ಆಕಾಶವಾಣಿಗೆ ಮಾಹಿತಿ ನೀಡಿದ್ದಾರೆ.

<><><>

ಯೇಸು ಕ್ರಿಸ್ತರ ಪುನರುತ್ಥಾನದ ಗುಡ್ ಫ್ರೈಡೇ ಮುಂದುವರೆದ ಭಾಗವಾಗಿ, ಕ್ರೈಸ್ತ ಬಾಂಧವರು ನಿನ್ನೆ ಜಾಗರಣೆ ಆಚರಿಸಿದರು. ಇಂದು ಈಸ್ಟರ್ ಭಾನುವಾರ ಆಚರಿಸುವರು.

<><><>

ಧಾರವಾಡದ ಸಿ.ಎಸ್.ಐ. ಹೆಬಿಕ್ ಸ್ಮಾರಕ ದೇವಾಲಯ ಸೇರಿದಂತೆ, ಮಂಗಳೂರು, ದಕ್ಷಿಣಕನ್ನಡ ಜಿಲ್ಲೆ, ಉತ್ತರಕನ್ನಡ ಜಿಲ್ಲೆ, ಚಿತ್ರದುರ್ಗ, ದೊಡ್ಡಬಳ್ಳಾಪುರ ಹಾಗೂ ಗದಗ್‌ನ ಚರ್ಚ್‌ಗಳಲ್ಲಿ ಕ್ರೈಸ್ತ ಬಾಂಧವರು ವಿಶೇಷ ಪ್ರಾರ್ಥನೆ ಸಲ್ಲಿಸಿದ ವರದಿಗಳು ಬಂದಿವೆ.

<><><>

ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು, ಯೇಸು ಕ್ರಿಸ್ತನ ತ್ಯಾಗವನ್ನು ಸ್ಮರಿಸಿದ್ದಾರೆ.

<><><>

ಕೊಡಗು ಜಿಲ್ಲೆಯ ನಾಪೋಕ್ಲು ಗ್ರಾಮದ, ಜನರಲ್ ತಿಮ್ಮಯ್ಯ ಕ್ರೀಡಾಂಗಣದಲ್ಲಿ, 24 ನೇ ವರ್ಷದ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಯನ್ನು, ವೀರಾಜಪೇಟೆ ಶಾಸಕ ಎ.ಎಸ್.ಪೊನ್ನಣ್ಣ ಉದ್ಘಾಟಿಸಿದ್ದಾರೆ. ಏಪ್ರಿಲ್ 30ರ ವರೆಗೆ ನಡೆಯಲಿರುವ ಕೊಡವ ಹಾಕಿ ಪಂದ್ಯಾವಳಿಯಲ್ಲಿ, 3 ಸಾವಿರಕ್ಕೂ ಅಧಿಕ ಹಾಕಿ ಆಟಗಾರರು ಪಾಲ್ಗೊಳ್ಳುತ್ತಿದ್ದಾರೆ. ಕುಂಡ್ಯೋಳಂಡ ಹಾಕಿ ಉತ್ಸವ ಸಮಿತಿ ಸಂಚಾಲಕ ದಿನೇಶ್ ಕಾರ್ಯಪ್ಪ, ಹಾಕಿ ಕಾರ್ನಿವಲ್ ಫೆಸ್ಟ್ ಬಗ್ಗೆ, ಪ್ರದೇಶ ಸಮಾಚಾರಕ್ಕಾಗಿ ಮಾಹಿತಿ ನೀಡಿದ್ದಾರೆ.

<><><>

ದಿನೇಶ್ ಕಾರ್ಯಪ್ಪ ಧ್ವನಿ 40 ಸೆಕೆಂದುಗಳು

<><><>

ಈಗ ಸಂಕ್ಷಿಪ್ತ ಸುದ್ದಿಗಳು:

<><><>

ಭಾರತರತ್ನ ಪುರಸ್ಕೃತ, ಐವರು ಸಾಧಕರ ಕೊಡುಗೆಯನ್ನು ಪ್ರಧಾನಮಂತ್ರಿ ನರೇಂದ್ರ ಮೋದಿ ಸ್ಮರಿಸಿ, ಅಭಿನಂದಿಸಿದ್ದಾರೆ.

<><><>

ಬಿಜೆಪಿ ಹಿರಿಯ ನಾಯಕ ಹಾಗೂ ಕೇಂದ್ರ ಸಚಿವ ರಾಜನಾಥ್ ಸಿಂಗ್ ಅಧ್ಯಕ್ಷತೆಯಲ್ಲಿ ಪಕ್ಷದ ಚುನಾವಣಾ ಪ್ರಣಾಳಿಕೆ ಸಮಿತಿ ರಚಿಸಲಾಗಿದೆ.

<><><>

ರಾಜ್ಯ ಬಿಜೆಪಿ ಚುನಾವಣಾ ನಿರ್ವಹಣಾ ಸಮಿತಿ ಸಂಚಾಲಕ ವಿ.ಸುನೀಲ್‌ಕುಮಾರ್, ಬೆಂಗಳೂರಿನಲ್ಲಿ ಸುದ್ದಿಗೋಷ್ಠಿ ನಡೆಸಿ, ರಾಜ್ಯದಲ್ಲಿ 'ಧನ್ಯವಾದ ಮೋದಿಜಿ' ಎಂಬ ಅಭಿಯಾನವನ್ನು ಆರಂಭಿಸಲಾಗುತ್ತಿದೆ ಎಂದರು.

<><><>

ಪ್ರತಿಪಕ್ಷಗಳ ವಿರುದ್ಧ ರಾಜಕೀಯ ಹಿತ ಸಾಧನೆಗಾಗಿ, ಕೇಂದ್ರ ಸರ್ಕಾರ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ ಎಂದು, ಗ್ರಾಮೀಣಾಭಿವೃದ್ಧಿ ಖಾತೆ ಸಚಿವ ಪ್ರಿಯಾಂಕ್ ಖರ್ಗೆ ಕಲಬುರ್ಗಿಯಲ್ಲಿ ಆರೋಪಿಸಿದ್ದಾರೆ.

<><><>

ಜಾನುವಾರು ರೋಗ ನಿಯಂತ್ರಣ ರಾಷ್ಟ್ರೀಯ ಕಾರ್ಯಕ್ರಮದಡಿ, ಕಾಲುಬಾಯಿ ರೋಗಕ್ಕೆ 5ನೇ ಸುತ್ತಿನ ಲಸಿಕೆ ನೀಡಿಕೆ ಕಾರ್ಯಕ್ರಮ, ನಾಳೆಯಿಂದ ಏಪ್ರಿಲ್ 30ರ ವರೆಗೆ ರಾಜ್ಯಾದ್ಯಂತ ನಡೆಯಲಿದೆ.

<><><>

ಕಲಬುರಗಿಯಲ್ಲಿ ಗರಿಷ್ಠ 41.8 ಡಿಗ್ರಿ ಸೆಲ್ಸಿಯಸ್ ಹಾಗೂ ಚಾಮರಾಜನಗರದಲ್ಲಿ ಕನಿಷ್ಠ 18.8 ಡಿಗ್ರಿ ಸೆಲ್ಸಿಯಸ್ ಉಷ್ಣಾಂಶ ದಾಖಲು.

<><><>

ಕೊನೆಯಲ್ಲಿ ಮತ್ತೊಮ್ಮೆ ಮುಖ್ಯಾಂಶಗಳು:

<><><>

- ಇಂದು, ಪ್ರಸಕ್ತ ಆರ್ಥಿಕ ವರ್ಷ ಮುಕ್ತಾಯ; ಬ್ಯಾಂಕ್ ಮತ್ತು ಎಲ್.ಐ.ಸಿ. ಭಾನುವಾರವೂ ಕಾರ್ಯನಿರ್ವಹಣೆ.
- ನಾಳೆ, ಏಪ್ರಿಲ್ 1 ರಿಂದ ನೂತನ ಹಣಕಾಸು ವರ್ಷಾರಂಭ; ಹಲವು ನಿಯಮಗಳಲ್ಲಿ ಮಹತ್ವದ ಬದಲಾವಣೆ.
- 18ನೇ ಲೋಕಸಭಾ ಚುನಾವಣೆ; ಅಭ್ಯರ್ಥಿಗಳ ಚುನಾವಣಾ ವೆಚ್ಚದ ಮೇಲೆ ತೀವ್ರ ನಿಗಾ.
- ಕೊಡಗಿನ ನಾಪೋಕ್ಲು ಗ್ರಾಮದಲ್ಲಿ, 24ನೇ ಕೊಡವ ಕೌಟುಂಬಿಕ ಹಾಕಿ ಪಂದ್ಯಾವಳಿಗೆ ಸಂಭ್ರಮದ ಚಾಲನೆ.

<><><>

ಇಲ್ಲಿಗೆ ಪ್ರದೇಶ ಸಮಾಚಾರ ಮುಕ್ತಾಯವಾಯಿತು.

<><><>

ನಮ್ಮ ಮುಂದಿನ ರಾಷ್ಟ್ರೀಯ ವಾರ್ತಾ ಪ್ರಸಾರ ಈ ಬೆಳಗ್ಗೆ 7.35 ಕ್ಕೆ.

<><><>

ಹರ್ಷ